ಶ್ರೀ ಎಸ್. ಆರ್. ಬೊಮ್ಮಾಯಿ.—ಈ ತಾಲ್ಲೂಕಿನಲ್ಲಿ ಮಧ್ಯಮ ನೀರಾವರಿ ಯೋಜನೆಯ ಉಡಂತೊರೆ ಯೋಜನೆಯನ್ನು ತೆಗೆದುಕೊಳ್ಳುವ ಸಲುವಾಗಿ ಈ ಯೋಜನೆಯ ರಿವೈಸ್ಡ್ ಎಸ್ಟಿಮೇಟ್ ಸರ್ಕಾರದ ಮುಂದೆ ಈಗ ಇದೆ. ಕೆಲವು ಇನ್ನೂ ಪ್ರಾರಂಭವಾಗಬೇಕಾಗಿದೆ. ಆದರೆ ಹೆಚ್ಚು ಹಣ ಖರ್ಚಾಗಿಲ್ಲ. ಆದಷ್ಟು ಬೇಗ ರಿವೈಸ್ಡ್ ಎಸ್ಟಿಮೇಟನ್ನು ಮಂಜೂರು ಮಾಡಿಸಿ ಕೆಲಸ ಪ್ರಾರಂಭ ಮಾಡುತ್ತೇವೆ. ಇನ್ನು ಗಂಗಾ ಕಲ್ಯಾಣ ಯೋಜನೆಯಲ್ಲಿ ಎರಡು ಯೋಜನೆಯನ್ನು ತೆಗೆದುಕೊಳ್ಳಲಾಗಿದ್ದು ಒಟ್ಟು ೪ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಲಾಗಿದೆ. ಆಮೇಲೆ ಗಿರಿಜನ ಯೋಜನೆಯಲ್ಲಿ ಎರಡು ಯೋಜನೆಗಳನ್ನು ಆದೇರೀತಿ ವಿತ ನೀರಾವರಿ ಯೋಜನೆಗಳಲ್ಲಿ ಎರಡನ್ನು ತೆಗೆದುಕೊಳ್ಳಲಾಗಿದ್ದು ಈಗ ಈ ಯೋಜನೆಗಳ ಕಾಮಗಾರಿಗಳನ್ನೆಲ್ಲಾ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಲಾಗಿದೆ. ಚಿಕ್ಕ ನೀರಾವರಿ ಯೋಜನೆಯೊಂದರಲ್ಲಿ ಕೆಲಸ ಮುಗಿದಿದ್ದು ೭೩೦ ಎಕರೆಗೆ ನೀರನ್ನು ಒದಗಿಸಲಾಗಿದೆ. ಪ್ರತಿಯೊಂದು ಯೋಜನೆಯ ವಿವರಗಳು ಸಧ್ಯಕ್ಕೆ ನನ್ನ ಹತ್ತಿರ ಇಲ್ಲ. ನಂತರ ಮಾನ್ಯ ಸದಸ್ಯರಿಗೆ ಅವುಗಳನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಜಿ. ರಾಜುಗೌಡ.—ಕೇವಲ ೨೩೭ ಎಕರೆಗೆ ಮಾತ್ರ ನೀರನ್ನು ಒದಗಿಸಿರುವುದು, ಆದರೆ ಮಾನ್ಯ ಮಂತ್ರಿಗಳು ೭೩೦ ಎಕರೆ ಎಂಬುದು ಹೇಳುತ್ತಿದ್ದಾರೆ. ಸಣ್ಣ ನೀರಾವರಿ ಯೋಜನೆಯಲ್ಲಿ ಒಂದು ಎಕರೆಗೂ ನೀರನ್ನು ಒದಗಿಸಿಲ್ಲ. ಆದ್ದರಿಂದ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿಸಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಟ್ಟು ೨೩೭ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ೪ ಹೆಕ್ಟೇರ್‌ಗೆ ನೀರನ್ನು ಒದಗಿಸಲಾಗಿದೆ. ಮಧ್ಯಮ ನೀರಾವರಿ ಯೋಜನೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತಿದ್ದು, ಆದಷ್ಟು ಬೇಗ ಅದನ್ನು ಮಂಜೂರು ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಮಂತ್ರಿಗಳು ಬಾಯಲ್ಲಿ ೭೩೭ ಹೆಕ್ಟೇರ್ ಎಂಬುದಾಗಿ ಹೇಳುತ್ತಿದ್ದಾರೆ. ಆದರೆ ಉತ್ತರದಲ್ಲಿ ೨೩೭ ಹೆಕ್ಟೇರ್ ಎಂಬುದಾಗಿ ಇದೆ. ನನ್ನ ತಾಲ್ಲೂಕಿನಲ್ಲಿ ಕೈಗೊಂಡಿರತಕ್ಕ ಪ್ರತಿಯೊಂದು ನೀರಾವರಿ ಯೋಜನೆಯಡಿಯಲ್ಲಿ ಎಷ್ಟೆಷ್ಟು ಎಕರೆ ನೀರಾವರಿಯಾಗಿದೆ ಎಂಬುದರ ವಿವರಗಳನ್ನು ಪ್ರತ್ಯೇಕವಾಗಿ ಕೊಡಬೇಕು. ಆದರ ವಿವರ ಇಲ್ಲದಿದ್ದರೆ ಇಲ್ಲವೆಂದು ಹೇಳಿ ನಂತರ ಕಳುಹಿಸಿ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರತಿಯೊಂದು ಯೋಜನೆಯ ವಿವರಗಳು ಸಧ್ಯಕ್ಕೆ ನನ್ನ ಹತ್ತಿರ ಇಲ್ಲ. ಅವುಗಳ ವಿವರಗಳನ್ನು ಮಾನ್ಯ ಸದಸ್ಯರಿಗೆ ನಂತರ ಕಳುಹಿಸಿ ಕೊಡುತ್ತೇನೆ. ಅವರು ಒಟ್ಟು ಎಷ್ಟು ಎಕರೆ ಎಂಬುದಾಗಿ ಕೇಳಿದ್ದಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಭದ್ರಾ ಎಡದಂಡೆ ಸೀಳು ಕಾಲುವೆ.

೧೩೭೮. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಕಂದಾಯ, ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಭದ್ರಾ ಎಡದಂಡೆ ಸೀಳು ಕಾಲುವೆಗಾಗಿ ಹಣವನ್ನೊದಗಿಸಿ ಮಂಜೂರಾತಿಯನ್ನು ಸರ್ಕಾರದವರು ಮಾಡಿದ್ದಾರೆಯೆ ?

ಆ) ಕೊರ್ಲ ಹಳ್ಳಿ, ಲಕ್ಕಿನ ಕೊಪ್ಪ, ಮತ್ತು ಇತರೆ ಗ್ರಾಮಗಳಿಗೆ ನೀರನ್ನು ಒದಗಿಸಲು ಸೀಳು ಕಾಲುವೆಯ ಕೆಲಸವನ್ನು ಕೈಗೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು).—

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಭದ್ರಾ ಎಡದಂಡೆಯಿಂದ ಈ ಗ್ರಾಮಂಗಳಿಗೆ ಸೀಳು ಕಾಲುವೆಗಾಗಿ ಸರ್ಕಾರದ ಮಂಜೂರಾತಿ ಆಗಿಲ್ಲ.

ಆ) ಪರಿಶೀಲನೆಯಲ್ಲಿದೆ.

ಶ್ರೀ ಬಿ. ಧರ್ಮಪ್ಪ.—ಈ ಭದ್ರಾ ಯೋಜನೆಯಲ್ಲಿ ಮುಳುಗಡೆಯಾದ ರೈತರೇ ಆಲ್ಲಿ ಬಂದು ವಾಸವಾಗಿದ್ದಾರೆ. ಆವೊತ್ತಿನಿಂದ, ಈವತ್ತಿನವರೆಗೂ ಈ ಜನರಿಗೆ ಅನುಕೂಲ ಮಾಡಿಕೊಡುತ್ತೇವೆಂದೂ ಆಶ್ವಾಸನೆಯನ್ನು ಕೊಟ್ಟುಕೊಂಡೇ ಬಂದಿದ್ದಾರೆ. ಆವೊತ್ತು ೧೦-೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಅನುಕೂಲವಾಗುವಂತಹ ಯೋಜನೆಗೆ ಇವೊತ್ತು ೩೫-೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂತಹ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ಈಗಲಾದರೂ ಅದರ ಬಗ್ಗೆ ಆ ಜನರಿಗೆ ಸಹಾಯ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ ? ಶಿವಮೊಗ್ಗ ತಾಲ್ಲೂಕಿನಲ್ಲಿ ಕೋರಲಹಳ್ಳಿ, ಆಕ್ಷೆಣಕೊಪ್ಪದ ಜನರೂ ಕೂಡ ಡ್ರೈ ಲ್ಯಾಂಡ್ ಭೂಮಿಯನ್ನೇ ಅವಲಂಬಿಸಿಕೊಂಡು ಜೀವನ ಮಾಡುತ್ತಿದ್ದಾರೆ. ನರಸಿಂಹರಾಜಪುರದಿಂದ ಬಂದಿರತಕ್ಕಂತಹ ಜನರೇ ಜಾಸ್ತಿ ಇದ್ದಾರೆ. ಆದ್ದರಿಂದ ಇದರ ಬಗ್ಗೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದೆ ಈ ಬಗ್ಗೆ ಒಂದು ಸಭೆಯೂ ನಡೆದು ಈ ಯೋಜನೆಯನ್ನು ಕೈಬಿಡಬೇಕೆಂದು ನಿರ್ಣಯವಾಗಿತ್ತು. ಆದರೆ ಇದನ್ನು ಪುನಃ ಪರಿಶೀಲನೆ ಮಾಡಲಾಗುತ್ತಿದೆ. ಇದಕ್ಕೆ ೧೭ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಜನರಿಗೆ ಅನುಕೂಲವನ್ನು ಒದಗಿಸಬೇಕಾದರೆ ೧೭ ಕ್ಯೂಸೆಕ್ಸ್ ನೀರು ಬೇಕಾಗಿದೆ. ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ನಿರ್ಣಯವನ್ನು ಕೈಗೊಳ್ಳುತ್ತದೆ.

ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಾಗಿರುವ ಮೊತ್ತ.

೧೨೬೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೀರಾವರಿ, ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ೧-೩-೮೮ ರಂದು ಸರ್ಕಾರದಿಂದ ಗುತ್ತಿಗೆದಾರರಿಗೆ ಪಾವತಿಯಾಗದೆ ಉಳಿದಿರುವ ಹಣವೆಷ್ಟು? (ಕಳೆದ ಮೂರು ವರ್ಷಗಳ ವಿವರಗಳನ್ನು ಇಲಾಖಾವಾರು ಕೊಡತಕ್ಕದ್ದು)

ಆ) ೧-೩-೮೮ ರವರೆಗೆ ಪಾವತಿ ಮಾಡಿದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ನೀರಾವರಿ ಮಂತ್ರಿಗಳು).—

ಅ) ೧-೩-೮೮ ರಂದು ಗುತ್ತಿಗೆದಾರರಿಗೆ ಪಾವತಿಯಾಗದೆ ಉಳಿದಿರುವ ಹಣದ ವಿವರಗಳು ಕೆಳಕಂಡಂತಿದೆ.

ನೀರಾವರಿ ವಲಯಗಳಲ್ಲಿ	...	೫೧.೦೧ ಕೋಟಿ ರೂ.ಗಳು
ಸಂಪರ್ಕ ಮತ್ತು ಕಟ್ಟಡ ವಲಯಗಳಲ್ಲಿ	...	೧೪.೪೬ ಕೋಟಿ ರೂ.ಗಳು
ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ	...	೩.೪೦ ಕೋಟಿ ರೂ.ಗಳು
ಒಟ್ಟು		೬೮.೮೭ ಕೋಟಿ ರೂ.ಗಳು.

ಆ) ೧-೩-೧೯೮೮ ರವರೆಗೆ ಯೋಜನಾ ಹಾಗೂ ಯೋಜನೇತರ ಕಾಮಗಾರಿಗಳ ಮೇಲೆ ವಹಾಡಿದ ವೆಚ್ಚ ಕೆಳಕಂಡಂತಿದೆ.

ನೀರಾವರಿ ವಲಯಗಳಲ್ಲಿ	...	೧೫೯.೯೭ ಕೋಟಿ ರೂ.ಗಳು
ಸಂಪರ್ಕ ಮತ್ತು ಕಟ್ಟಡ ವಲಯಗಳಲ್ಲಿ	...	೩೬.೮೭ ಕೋಟಿ ರೂ.ಗಳು
ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ	...	೧೭.೩೮ ಕೋಟಿ ರೂ.ಗಳು
ಒಟ್ಟು		೨೧೪.೨೨ ಕೋಟಿ ರೂ.ಗಳು